ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ-/ಇತರೆ-5/2015-16

ನಿರ್ದೇಶಕರ ಕಛೇರಿ.
ಪದವಿ ಪೂರ್ವ ಶಿಕ್ಷಣ ಇಲಾಖೆ
ಸಂಪಿಗೆ ರಸ್ತೆ, 18ನೇ ಕ್ರಾಸ್
ಮಲ್ಲೇಶ್ವರಂ, ಬೆಂಗಳೂರು-12
ದಿನಾಂಕ: 5 -01-2016.

**ಸುತ್ತೋಲೆ**

ವಿಷಯ: ಸ್ವಾಮಿ ವಿವೇಕಾನಂದರ ಜನ್ಮ ದಿನವಾದ ಜನವರಿ 12ರಂದು ಪ್ರತಿ ವರ್ಷ **"ರಾಷ್ಟ್ರೀಯ ಯುವ ದಿನಾಚರಣೆ"**ಯನ್ನಾಗಿ ಆಚರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಇಡಿ 264 ಯುಜಿಹೆಚ್ 2015 ಬೆಂಗಳೂರು ದಿನಾಂಕ 30ನೇ ಡಿಸೆಂಬರ್ 2015.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಸ್ವಾಮಿ ವಿವೇಕಾನಂದರ ಜನ್ಮ ದಿನವಾದ ಜನವರಿ 12ರಂದು ಪ್ರತಿ ವರ್ಷ **"ರಾಷ್ಟ್ರೀಯ ಯುವ ದಿನಾಚರಣೆ"**ಯನ್ನಾಗಿ ದಿನಾಂಕ 12/01/2016 ರಿಂದ 19/01/2016ರ ವರೆಗೆ **"ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹವನ್ನಾಗಿ"** ಆಚರಿಸುವ ಬಗ್ಗೆ ಸರ್ಕಾರದ ನಡವಳಿಗಳು ಇದರ ಪ್ರತಿಯನ್ನು ಹಾಗೂ ಕಾರ್ಯಸೂಚಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಅನುಬಂದದಲ್ಲಿನ ಮಾರ್ಗಸೂಚಿಯಂತೆ ಕಾರ್ಯಕ್ರಮ ನಡೆಸಲು ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಮುಂದಿನ ಕ್ರಮಕ್ಕಾಗಿ.
2. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಎಲ್ಲಾ ಉಪ ನಿರ್ದೇಶಕರುಗಳ ಕಛೇರಿಗೆ ವೆಬ್‌ಸೈಟ್‌ಗೆ ಅಳವಡಿಸಲು.
4. ಎಲ್ಲಾ ಸರ್ಕಾರಿ/ಅನುದಾನಿತ ಕಾಲೇಜುಗಳಿಗೆ ಉಪನಿರ್ದೇಶಕರ ಮೂಲಕ ಮುಂದಿನ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸ್ವಾಮಿ ವಿವೇಕಾನಂದರ ಜನ್ಮ ದಿನವಾದ ಜನವರಿ 12ರಂದು ಪ್ರತಿ ವರ್ಷ "ರಾಷ್ಟ್ರೀಯ ಯುವ ದಿನಾಚರಣೆ" ಯನ್ನಾಗಿ ಆಚರಿಸುವ ಬಗ್ಗೆ.

-----

**ಓದಲಾಗಿದೆ:**

1. ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು ಇವರ ದಿನಾಂಕ: 26-12-2015ರ ಸುತ್ತೋಲೆ.
2. ಇದೇ ಸಮಸಂಖ್ಯೆಯ ದಿನಾಂಕ:28-12-2015ರ ಸರ್ಕಾರದ ಆದೇಶ.

**ಪ್ರಸ್ತಾವನೆ:**

ಮೇಲೆ ಓದಲಾದ ಕಾಲೇಜು ಶಿಕ್ಷಣ ಆಯುಕ್ತರ ಸುತ್ತೋಲೆಯಲ್ಲಿ ರಾಷ್ಟ್ರ ಕಂಡ ಮಹಾನ್ ದಾರ್ಶನಿಕ, ತತ್ವಶಾಸ್ತ್ರಜ್ಞ, ಚಿಂತಕ, ಶಿಕ್ಷಣ ತಜ್ಞ, ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ (12.01.1863) ಜನ್ಮದಿನವಾದ ಜನವರಿ 12 ನ್ನು ಭಾರತೀಯ ಯುವ ಜನಾಂಗಕ್ಕೆ ಸ್ವಾಮಿ ವಿವೇಕಾನಂದರ ಆದರ್ಶ ಹಾಗೂ ವಿಚಾರಧಾರೆಗಳು ಸ್ಪೂರ್ತಿದಾಯಕವಾಗಲಿ ಎಂಬ ಸದಾಶಯದಿಂದ 1984 ರಿಂದ ದೇಶದಾದ್ಯಂತ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ" ಯನ್ನಾಗಿ ಆಚರಿಸಲಾಗುತ್ತಿದೆ. ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸಾಧಕರೂ ಆಗಿರುವ ಸ್ವಾಮಿ ವಿವೇಕಾನಂದರು ಯುವ ಜನಾಂಗಕ್ಕೆ ನೀಡಿರುವ ಸಂದೇಶಗಳು ಅಂದಿಗೂ ಇಂದಿಗೂ ಎಂದೆಂದಿಗೂ ಸ್ವೀಕಾರಾರ್ಹವಾಗಿರುತ್ತವೆ.

ರಾಷ್ಟ್ರೀಯತೆ, ದೇಶಭಕ್ತಿ ಹಾಗೂ ಭಾರತೀಯರ ಜೀವನದಲ್ಲಿ ಅದರಲ್ಲೂ ವಿಶೇಷವಾಗಿ ಸ್ವಾಮಿ ವಿವೇಕಾನಂದರ ಗುರಿಯಾಗಿದ್ದ ಯುವ ಜನಾಂಗದಲ್ಲಿ ದೇಶ ಕಟ್ಟುವ, ದೇಶದ ಭವಿಷ್ಯವನ್ನು ಅತ್ಯುಜ್ವಲವಾಗಿ ರೂಪಿಸುವ, ಒಡೆದ ಮನಸ್ಸುಗಳಿಗೆ ಭಾವೈಕ್ಯದ ಬೆಸುಗೆ ಹಾಕುವ ಅದ್ಭುತ ಸಾಮರ್ಥ್ಯ ಇರುವ ಯುವಶಕ್ತಿಗೆ ಈ ದೇಶದ ಭವ್ಯ ಇತಿಹಾಸ, ಪರಂಪರೆ, ಸಂಸ್ಕೃತಿಗಳ ವಿಚಾರದಲ್ಲಿ ಹೆಮ್ಮೆಪಡುತ್ತಲೇ ವಿದ್ಯಾರ್ಥಿಗಳು ತಮ್ಮ ವರ್ತಮಾನದ ಕರ್ತವ್ಯದ ಬಗ್ಗೆ ಆಲೋಚನೆ ಮಾಡುವಂತೆ ಹಾಗೂ ಕಾರ್ಯಪ್ರವೃತ್ತರಾಗುವಂತೆ ಸ್ವಾಮಿ ವಿವೇಕಾನಂದರು ಬೋಧಿಸಿರುವ ಮೌಲ್ಯಗಳನ್ನು ರಾಜ್ಯದಾದ್ಯಂತ ಸಾರ್ವಜನಿಕರು, ಕಾಲೇಜು ವಿದ್ಯಾರ್ಥಿಗಳು ಮತ್ತು ಯುವ ಜನತೆಗೆ ಸ್ಪೂರ್ತಿಯ ಸಂದೇಶವನ್ನು ನೀಡುವ ನಿಟ್ಟಿನಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜುಗಳಲ್ಲಿ ದಿನಾಂಕ: 12.01.2016 ರಿಂದ 19.01.2016 ರವರೆಗೆ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ" ವನ್ನು ಆಚರಿಸಲು ಹಾಗೂ ಈ ಸಪ್ತಾಹ ಕಾಯತ್ರಮದಲ್ಲಿ ವಿವೇಕಾನಂದರ ತತ್ವ, ಆದರ್ಶ ಹಾಗೂ ಧ್ಯೇಯಗಳನ್ನು ಯುವ ಜನಾಂಗಕ್ಕೆ ಪರಿಚಯಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಯುವ ಸಪ್ತಾಹ ಕಾರ್ಯಕ್ರಮದ ಮಾರ್ಗಸೂಚಿಗಳನುಸಾರ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸುತ್ತೋಲೆ ಹೊರಡಿಸಿರುತ್ತಾರೆ.

ಅದರಂತೆ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು, ಕಾಲೇಜು ಶಿಕ್ಷಣ / ತಾಂತ್ರಿಕ ಶಿಕ್ಷಣ ಇಲಾಖೆಯ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಪದವಿ ಕಾಲೇಜುಗಳು / ಇಂಜಿನಿಯರಿಂಗ್ ಕಾಲೇಜುಗಳು / ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಆಚರಿಸಲು ಮೇಲೆ (2)ರಲ್ಲಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಆದೇಶ ಭಾಗವನ್ನು ಮುಂದುವರೆಸುತ್ತಾ, ಸ್ವಾಮಿ ವಿವೇಕಾನಂದರವರ ಜನ್ಮದಿನಾಚರಣೆ ಅಂಗವಾಗಿ ದಿನಾಂಕ:12-01-2016 ರಿಂದ 19-01-2016 ರವರೆಗೆ ಹಮ್ಮಿಕೊಳ್ಳಲಾಗಿರುವ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ"ದ ಪ್ರಯುಕ್ತ ಆಯಾ ದಿನಾಂಕದ ಕಾರ್ಯಕ್ರಮಗಳನ್ನು ಸ್ಥಾನಿಕವಾಗಿ ಲಭ್ಯವಾಗಬಹುದಾದ ಶ್ರೀ ರಾಮಕೃಷ್ಣ ಮಿಷನ್/ಮಠ ಹಾಗೂ ಸ್ವಾಮಿ ವಿವೇಕಾನಂದರವರ ಆಶ್ರಮಗಳು ಮತ್ತು ಇತರೆ ಸರ್ಕಾರೇತರ ಸಂಘ ಸಂಸ್ಥೆ / ಕ್ರಿಯಾಶೀಲ ಯುವ ಸಂಘಗಳನ್ನೂ ಸಹ ತೊಡಗಿಸಿಕೊಂಡು ಅನುಬಂಧದಲ್ಲಿ ನೀಡಲಾಗಿರುವ ಕಾರ್ಯಕ್ರಮಗಳ ಪಟ್ಟಿಯಂತೆ ಕಾರ್ಯನಿರ್ವಹಿಸಬೇಕಾಗಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 264 ಯುಜಿಹೆಚ್ 2015 ಬೆಂಗಳೂರು, ದಿನಾಂಕ:30ನೇ ಡಿಸೆಂಬರ್ 2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು, ಕಾಲೇಜು ಶಿಕ್ಷಣ / ತಾಂತ್ರಿಕ ಶಿಕ್ಷಣ ಇಲಾಖೆಯ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಪದವಿ ಕಾಲೇಜುಗಳು / ಇಂಜಿನಿಯರಿಂಗ್ ಕಾಲೇಜುಗಳು / ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ:

12.01.2016 ರಿಂದ 19.01.2016ರವರೆಗೆ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ" ವನ್ನಾಗಿ ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಆಚರಿಸಲು ನಿಗದಿಗೊಳಿಸಿದ ಆಯಾ ದಿನದ ಕಾರ್ಯಕ್ರಮಗಳನ್ನು ನಿರ್ವಹಿಸುವಂತೆ ಈ ಮೂಲಕ ಸರ್ಕಾರ ಆದೇಶಿಸಿದೆ. (ಅನುಬಂಧದಲ್ಲಿರುವ ಕಾರ್ಯಕ್ರಮಗಳು ಸೂಚನಾತ್ಮಕವಾಗಿದ್ದು, ಅಂತರ್ ಬದಲಾವಣೆ ಮತ್ತು ದಿನಾಂಕಗಳಲ್ಲಿನ ಕಾರ್ಯಕ್ರಮಗಳನ್ನು ಆಯಾ ಸಂದರ್ಭಾನುಸಾರ ಸಹ ಬದಲಾಯಿಸಲು ಅವಕಾಶವಿದ್ದು, ಸ್ಥಳೀಯವಾಗಿ ಮಹತ್ವವುಳ್ಳ ಯುವ ಸಬಲೀಕರಣಕ್ಕೆ ಸಂಬಂಧಿಸಿದ ಇತರೆ ಸೂಕ್ತ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಬಹುದಾಗಿದೆ).

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆರ್.ಸೋಮಶೇಖರ್)
ಸರ್ಕಾರದ ಉಪ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ).

ಗೆ:

1) ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು.
2) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3) ಆಯುಕ್ತರು, ಸಾರಿಗೆ ಇಲಾಖೆ, ಬೆಂಗಳೂರು
4) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5) ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
6) ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
7) ಎಲ್ಲಾ ಜಂಟಿ ನಿರ್ದೇಶಕರುಗಳು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಬೆಂಗಳೂರು / ಮೈಸೂರು / ಮಂಗಳೂರು / ಶಿವಮೊಗ್ಗ / ಧಾರವಾಡ / ಕಲಬುರಗಿ(ಕಾಲೇಜು ಶಿಕ್ಷಣ ಆಯುಕ್ತರ ಮುಖಾಂತರ)
8) ಎಲ್ಲಾ ಪ್ರಾಂಶುಪಾಲರುಗಳು, ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು / ಇಂಜನಿಯರಿಂಗ್ ಕಾಲೇಜುಗಳು / ಪಾಲಿಟೆಕ್ನಿಕ್ ಕಾಲೇಜುಗಳು(ಕಾಲೇಜು ಶಿಕ್ಷಣ ಆಯುಕ್ತರು / ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
9) ಎಲ್ಲಾ ಪ್ರಾಂಶುಪಾಲರುಗಳು, ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳು(ಪದವಿ ಪೂರ್ವ ಶಿಕ್ಷಣ ನಿರ್ದೇಶಕರ ಮುಖಾಂತರ)

ಪ್ರತಿ:

1) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
2) ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರು ಇವರ ಆಪ್ತ ಕಾರ್ಯದರ್ಶಿಯವರು
3) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರ ರವರ ಆಪ್ತ ಕಾರ್ಯದರ್ಶಿಯವರು
4) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
5) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯುವಜನ ಸೇವಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರು
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರು
8) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರು
9) ಸರ್ಕಾರದ ಕಾರ್ಯದರ್ಶಿಗಳು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ, ವಿಕಾಸಸೌಧ, ಬೆಂಗಳೂರು.
10) ಸರ್ಕಾರದ ಉಪ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು).
11) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಅನುಬಂಧ

**ಸ್ವಾಮಿ ವಿವೇಕಾನಂದರವರ ಜನ್ಮದಿನಾಚರಣೆ ಅಂಗವಾಗಿ ದಿನಾಂಕ:12-01-2016 ರಿಂದ 19-01-2016 ರವರೆಗೆ ಹಮ್ಮಿಕೊಳ್ಳಲಾಗಿರುವ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ"ದ ಆಯಾ ದಿನಾಂಕದ ಕಾರ್ಯಕ್ರಮಗಳು**

| ದಿನಾಂಕ | ಕಾರ್ಯಕ್ರಮಗಳು | ಅಧ್ಯಕ್ಷತೆ |
|---|---|---|
| 12ನೇ ಜನವರಿ ರಾಷ್ಟ್ರೀಯ ಯುವ ದಿನ (ಸ್ವಾಮಿ ವಿವೇಕಾನಂದ ಜಯಂತಿ) | 1. ಸ್ವಾಮಿ ವಿವೇಕಾನಂದ ತತ್ವಾದರ್ಶಗಳನ್ನು ಯುವಜನತೆಯ ಮೇಲೆ ಸ್ಫೂರ್ತಿಯ ನೆಲೆಯಾಗುವಂತೆ ಮಾಡುವುದು.<br>2. ಯುವ ಕಾರ್ಯಕ್ರಮಗಳ ಮೇಲೆ ಹಾಗೂ ಸ್ವಾಮಿ ವಿವೇಕಾನಂದರ ವಿಚಾರಗಳ ಮೇಲೆ ಚರ್ಚೆ (Debate)- ಕಾಲೇಜು ಮಟ್ಟ, ಅಂತರ್ ಕಾಲೇಜು ಮಟ್ಟ ಹಾಗೂ ಜಿಲ್ಲಾ ಮಟ್ಟದಲ್ಲಿ ಚರ್ಚಾಸ್ಪರ್ಧೆ<br>3. ಸ್ವಾಮಿ ವಿವೇಕಾನಂದರ ವಾಣಿಯನ್ನು ಜನರಿಗೆ ತಲುಪಿಸಲು 1.5 (ಒಂದುವರೆ) ಕಿ.ಮೀ. ರಿಂದ 2.00 (ಎರಡು) ಕಿ.ಮೀ. ಅಂತರದವರೆಗೆ ಜಾಥಾ (walkathon) ನಡೆಸುವುದು.<br>4. ಸಾರ್ವಜನಿಕ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ದಾನ ಮಾಡಿದ ದಾನಿಗಗಳ ವಿವರಗಳನ್ನೊಳಗೊಂಡ ಬೋರ್ಡ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಾಕುವ ಮುಖಾಂತರ ಇತರರನ್ನು ಪ್ರೇರೇಪಿಸುವುದು.<br>ಉದಾಹರಣೆ: ಶಾಲಾ ಕಾಲೇಜು, ಆಸ್ಪತ್ರೆ, ಭೂಮಿ, ದೇವಸ್ಥಾನ ಮುಂತಾದವುಗಳಿಗೆ ತನು, ಮನ, ಧನ ನೀಡಿದ ದಾನಿಗಳು | 1. ಜಿಲ್ಲಾ ಮಟ್ಟದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆ ಮತ್ತು ಜಿಲ್ಲಾಧಿಕಾರಿಯವರ ಉಪಾಧ್ಯಕ್ಷತೆಯೊಂದಿಗೆ ಆ ಜಿಲ್ಲೆಯ ಕ್ಷೇತ್ರಕ್ಕೆ ಸಂಬಂಧಪಟ್ಟ ಮಾನ್ಯ ಶಾಸಕರುಗಳು (ಎಂ.ಎಲ್.ಎ & ಎಂ.ಎಲ್.ಸಿ), ಕೇಂದ್ರ ಸ್ಥಾನದಲ್ಲಿನ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉಪ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಉಪ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳನ್ನೊಳಗೊಂಡ ಸಮಿತಿ ರಚಿಸುವುದು.<br>2. ಈ ಸಮಿತಿಯು ಸ್ಥಾನಿಕವಾಗಿ ಲಭ್ಯವಾಗಬಹುದಾದ ಶ್ರೀ ರಾಮಕೃಷ್ಣ ಮಿಷನ್/ಮಠ ಹಾಗೂ ಸ್ವಾಮಿ ವಿವೇಕಾನಂದರವರ ಆಶ್ರಮಗಳು ಮತ್ತು ಇತರೆ ಸರ್ಕಾರೇತರ ಸಂಘ ಸಂಸ್ಥೆಗಳನ್ನೂ ಸಹ ತೊಡಗಿಸಿಕೊಂಡು ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸಿ ಪ್ರತಿ ದಿನದ ಕಾರ್ಯಕ್ರಮ ನಿರ್ವಹಿಸುವುದು.<br>3. ಇದೇ ರೀತಿ ತಾಲ್ಲೂಕಾ ಮಟ್ಟದಲ್ಲಿ ತಾಲ್ಲೂಕಿಗೆ ಸಂಬಂಧಿಸಿದ ಆಯಾ |

| | | |
|---|---|---|
| | | ತಾಲ್ಲೂಕಿನ ತಹಶೀಲ್ದಾರರ ನೇತೃತ್ವದಲ್ಲಿ ಸಂಬಂಧಿಸಿದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಎಲ್ಲಾ ಸಂಬಂಧಿಸಿದ ಇಲಾಖೆಗಳ ಅಧಿಕಾರಿ/ ನೌಕರರುಗಳನ್ನೊಳಗೊಂಡ ಮತ್ತು ಸ್ಥಾನಿಕವಾಗಿ ಲಭ್ಯವಾಗಬಹುದಾದ ಶ್ರೀ ರಾಮಕೃಷ್ಣ ಮಿಷನ್/ಮಠ ಹಾಗೂ ಸ್ವಾಮಿ ವಿವೇಕಾನಂದರವರ ಆಶ್ರಮಗಳು ಮತ್ತು ಇತರೆ ಸರ್ಕಾರೇತರ ಸಂಘ ಸಂಸ್ಥೆಗಳನ್ನೂ ಸಹ ತೊಡಗಿಸಿಕೊಂಡು ತಾಲ್ಲೂಕು ಮಟ್ಟದಲ್ಲಿ ಸಭೆ ನಡೆಸಿ ನಿಗದಿಗೊಳಿಸಿದ ಆಯಾ ದಿನದ ಕಾರ್ಯಕ್ರಮಗಳನ್ನು ನಿರ್ವಹಿಸುವುದು. |
| 13ನೇ ಜನವರಿ ಭಾಗವಹಿಸುವಿಕೆ | 1. ರಾಷ್ಟ್ರೀಯ ಹಾಗೂ ಸಾಮಾಜಿಕ ನೆಲೆಯುಳ್ಳ ಸಾಕ್ಷರತೆ, ಸಮುದಾಯ, ಗೀತೆಗಳನ್ನು ಯುವಕರಿಂದ ಹಾಡಿಸುವುದು<br>2. ಸ್ಥಳೀಯ ಜಾನಪದ, ಸಂಸ್ಥೆಗಳ ಕಲಾವಿದರಿಂದ ಬೊಂಬೆ ಪ್ರದರ್ಶನ, ನಾಟಕದಲ್ಲಿ ಯುವಕರನ್ನು ತೊಡಗಿಸುವುದು.<br>3. ಹಳ್ಳಿಗಾಡಿನ ವಿವಿಧ ಕಲೆ-ಕಸೂತಿಗಳ ಹಾಗೂ ವೃತ್ತಿಪರ ಕೌಶಲ್ಯಗಳನ್ನು ಅನಾವರಣಗೊಳಸುವುದು.<br>4. ಸಾರ್ವಜನಿಕರಿಂದ ಅನುಪಯುಕ್ತ ಗೊಂಬೆಗಳನ್ನು ಸಂಗ್ರಹಿಸಿ ಅಂಗನವಾಡಿ/ಶಾಲೆಗಳಿಗೆ ನೀಡುವುದು ಮತ್ತು ಪುಸ್ತಕಗಳನ್ನು ಸಂಗ್ರಹಿಸಿ ಶಾಲೆ/ಲೈಬ್ರರಿಗಳಿಗೆ ನೀಡುವುದು. | |
| 14 & 15ನೇ ಜನವರಿ | 1. "ಸಾರ್ವತ್ರಿಕ ಸಾಕ್ಷರತೆಯಲ್ಲಿ ಯುವಜನತೆಯ ಪಾತ್ರ"ದ ಕುರಿತು ಭಾಷಣ ಸ್ಪರ್ಧೆ | |

| | | |
|---|---|---|
| | 2. ರಾಷ್ಟ್ರೀಯ ಮಹತ್ವದ ವಿಷಯಗಳ ಕುರಿತು ಯುವಕರಿಂದ ಕೌಶಲ್ಯಗಳ ಪ್ರದರ್ಶನ | |
| 16ನೇ ಜನವರಿ ರಾಷ್ಟ್ರೀಯ ಸೇವಾ ದಿನ | 1. ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರನ್ನು ಒಳಗಂಡ ಪರಿಸರ ಸಂರಕ್ಷಣೆ ಕುರಿತಾದ ವಿಶೇಷ ಕಾರ್ಯಕ್ರಮ.<br>2. ಹಳ್ಳಿ/ನಗರಗಳ ಸ್ವಚ್ಛತೆ ಕುರಿತಾಗಿ ಸ್ವಯಂ ಪ್ರೇರಣೆ ಮೇಲೆ ಶ್ರಮದಾನ / ವಿಶೇಷ ಘಟಕ ಕಾರ್ಯಕ್ರಮ.<br>3. ನೇತ್ರದಾನ, ರಕ್ತದಾನ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳು<br>4. ನೀರಿನ ಕೊಳ, ರಸ್ತೆ ಕೆಲಸ ಕಾರ್ಯಗಳ ಸಂರಕ್ಷಣೆ ಬಗ್ಗೆ ಯುವಜನತೆಯನ್ನು ಬಳಸಿಕೊಳ್ಳುವ ಕಾರ್ಯಕ್ರಮ. | |
| 17ನೇ ಜನವರಿ ದೈಹಿಕ ದೃಢತೆ | 1. ಗ್ರಾಮೀಣ ಕ್ರೀಡೆ ಹಾಗೂ ವಿಶೇಷ ಕ್ರೀಡೆಗಳಿಗೆ ಪ್ರೋತ್ಸಾಹ.<br>2. ಸಾಹಸ ಕ್ರೀಡೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು | |
| 18ನೇ ಜನವರಿ ಶಾಂತಿಗಾಗಿ ಯುವಜನತೆ ದಿನ | 1. ದೇಶದಲ್ಲಿ ಶಾಂತಿ ನೆಲೆಸಲು ಸಮಾವೇಶ ಹಾಗೂ ಚರ್ಚೆಗಳು.<br>2. ಕ್ರೀಡೆಗಳ ಆಯೋಜನೆ. | |
| 19ನೇ ಜನವರಿ ಕೌಶಲ್ಯ ಅಭಿವೃದ್ಧಿ | 1. ಯುವಜನರು ತಯಾರಿಸಿದ ಕೌಶಲ್ಯಾಭಿವೃದ್ಧಿಯ ವಸ್ತುಗಳ ವಸ್ತು ಪ್ರದರ್ಶನ ಏರ್ಪಡಿಸುವುದು.<br>2. ಹೊಸ ವಿಷಯಗಳ ತರಬೇತಿಯನ್ನು ಪ್ರಾರಂಭಿಸುವುದು.<br>3. ಸರ್ಕಾರದ ಯುವ ಕಾರ್ಯಕ್ರಮಗಳ ವಿವರಗಳನ್ನು ಯುವಜನತೆಗೆ ತಲುಪಿಸುವುದು.<br>4. ರಾಷ್ಟ್ರೀಯ ಯುವ ಸಪ್ತಾಹದ ಕ್ರೋಢೀಕರಣ. | ಈ ಎಲ್ಲಾ ಕಾರ್ಯಕ್ರಮಗಳನ್ನು ಸಮಾರೋಪಗೊಳಿಸುವುದು ಮತ್ತು ವರದಿಸುವುದು. |